ಕರ್ನಾಟಕ ಸರ್ಕಾರ
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: DTE-ADMIOEST(4)/8/2024

ತಾಂತ್ರಿಕ ಶಿಕ್ಷಣ ಆಯುಕ್ತಾಲಯ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು – 560 001.
ದಿನಾಂಕ: 29.07.2025

## "ಪರಿಚಲನಾದೇಶ"

**ವಿಷಯ :** ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರು ವೃಂದದ ದಿನಾಂಕ: 01.01.2023 ರಿಂದ 31.12.2023 ರ ಅವಧಿಗೆ ದಿನಾಂಕ: 01.01.2024 ರಲ್ಲಿದ್ದಂತೆ **ಅಂತಿಮ ಜೇಷ್ಠತಾ ಪಟ್ಟಿ**ಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಪತ್ರ ಸಂಖ್ಯೆ: ಇಡಿ 32 ಡಿಟಿಇ 2024, ದಿನಾಂಕ: 24.07.2025.

***

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿನ ಪ್ರಾಂಶುಪಾಲರು ವೃಂದದ ದಿನಾಂಕ: 01.01.2024 ರಲ್ಲಿದ್ದಂತೆ **ಅಂತಿಮ ಜೇಷ್ಠತಾ ಪಟ್ಟಿ**ಯನ್ನು ಪ್ರಕಟಿಸಲಾಗಿದೆ. ಸದರಿ ಸರ್ಕಾರದ ಅಧಿಸೂಚನೆಯನ್ನು ಸಂಬಂಧಪಟ್ಟವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

**ನಿರ್ದೇಶಕರು,**
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು.

29/7/25

**ಇವರಿಗೆ:-**

ತಾಂತ್ರಿಕ ಶಿಕ್ಷಣ ಇಲಾಖೆಯ ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ;

**ಪ್ರತಿ:-**

1. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
2. ಆಪ್ತ ಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
3. ಆಪ್ತ ಶಾಖೆ, ಜಂಟಿ ನಿರ್ದೇಶಕರು (ಆ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
4. ಸರ್ಕಾರ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು;
5. ನೋಡಲ್ ಅಧಿಕಾರಿ, ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು (ಅಧಿಸೂಚನೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು);
6. ಶಾಖಾ ರಕ್ಷ ಕಡತ.

ಕರ್ನಾಟಕ ಸರ್ಕಾರ

ಸಂಖ್ಯೆ :ಇಡಿ 32 ಡಿಟಿಇ 2024

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಡಾ|| ಬಿ.ಆರ್‌ಅಂಬೇಡ್ಕರ್ ವೀದಿ
ಬೆಂಗಳೂರು, ದಿನಾಂಕ:24.07.2025

## ಅಧಿಸೂಚನೆ

**ವಿಷಯ:** ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರು ವೃಂದದ ದಿನಾಂಕ:01.01.2023 ರಿಂದ 31.12.2023ರ ಅವಧಿಗೆ ದಿನಾಂಕ:01.01.2024ರಲ್ಲಿದ್ದಂತೆ **ಅಂತಿಮ ಜೇಷ್ಠತಾ ಪಟ್ಟಿ**ಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 114 ಡಿಟಿಇ 2019, ದಿನಾಂಕ:12.10.2021.
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 87 ಟಿಪಿಇ 2019, ದಿನಾಂಕ:15.02.2022.
3. ಸರ್ಕಾರದ ಆದೇಶ ಸಂಖ್ಯೆ:ಇಡಿ 118 ಡಿಟಿಇ 2010, ದಿನಾಂಕ:31.03.2011.
4. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 32 ಡಿಟಿಇ 2024, ದಿನಾಂಕ:09.05.2025.

*****

ತಾಂತ್ರಿಕ ಶಿಕ್ಷಣ ಇಲಾಖೆಯ 2006ರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪ್ರತ್ಯೇಕ ಎಐಸಿಟಿಇ ವೇತನ ಶ್ರೇಣಿಯನ್ನು ಹೊಂದಿರುವ ಪ್ರಾಂಶುಪಾಲರು ಗ್ರೇಡ್-2 (ಗ್ರೂಪ್-ಎ ಹಿರಿಯ ಶ್ರೇಣಿ) ಮತ್ತು ಪ್ರಾಂಶುಪಾಲರು ಗ್ರೇಡ್-1 (ಗ್ರೂಪ್-ಎ ಕಿರಿಯ ಶ್ರೇಣಿ) ಹುದ್ದೆಗಳು ಮಂಜೂರಾಗಿರುತ್ತವೆ. ಪ್ರಾಂಶುಪಾಲರು ಗ್ರೇಡ್-2 ಹುದ್ದೆಯನ್ನು ಪ್ರಾಂಶುಪಾಲರು ಗ್ರೇಡ್-1 ವೃಂದದಿಂದ ಹಾಗೂ ಪ್ರಾಂಶುಪಾಲರು ಗ್ರೇಡ್-1 ಹುದ್ದೆಯನ್ನು ಉಪನ್ಯಾಸಕರ ವೃಂದದಿಂದ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.

ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ 2017ರನ್ವಯ ಕ್ರಮ ತೆಗೆದುಕೊಳ್ಳುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ:27.02.2019 ಮತ್ತು ದಿನಾಂಕ:15.05.2019ರಲ್ಲಿ ನೀಡಿರುವ ಸೂಚನೆಗಳನುಸಾರ ಉಲ್ಲೇಖ(1)ರ ಅಧಿಸೂಚನೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್‌ಗಳ **ಪ್ರಾಂಶುಪಾಲರು/ಪ್ರಾಂಶುಪಾಲರು ಗ್ರೇಡ್-1** ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು (ದಿನಾಂಕ:16.05.2019ರಲ್ಲಿದ್ದಂತೆ) ಪ್ರಕಟಿಸಲಾಗಿರುತ್ತದೆ.

ಮುಂದುವರೆದು, ಉಲ್ಲೇಖ(2)ರ ಅಧಿಸೂಚನೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್‌ಗಳ **ಪ್ರಾಂಶುಪಾಲರು ಗ್ರೇಡ್-2** ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು (ದಿನಾಂಕ:16.05.2019ರಲ್ಲಿದ್ದಂತೆ) ಪ್ರಕಟಿಸಲಾಗಿರುತ್ತದೆ.

ಉಲ್ಲೇಖ(3)ರಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಪಾಲಿಟೆಕ್ನಿಕ್‌ಗಳ ಬೋಧಕ ವರ್ಗದವರಿಗೆ 6ನೇ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸಲಾಗಿದೆ. ಸದರಿ ಆದೇಶದಲ್ಲಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರತ್ಯೇಕ ಎಐಸಿಟಿಇ ವೇತನ ಶ್ರೇಣಿಯನ್ನು ಹೊಂದಿರುವ 'ಪ್ರಾಂಶುಪಾಲರು ಗ್ರೇಡ್-2' ಮತ್ತು 'ಪ್ರಾಂಶುಪಾಲರು ಗ್ರೇಡ್-1' ಹುದ್ದೆಗಳನ್ನು 'ಪ್ರಾಂಶುಪಾಲರು' ಎಂದು ಮರುಪದನಾಮೀಕರಿಸಿ ಒಂದೇ ವೇತನ ಶ್ರೇಣಿಯನ್ನು ನಿಗದಿಪಡಿಸಲಾಗಿದೆ.

....2

ಹೀಗಾಗಿ, ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರ ವೃಂದದ ಜೇಷ್ಠತೆಯಲ್ಲಿ, ಪ್ರಾಂಶುಪಾಲರು ಗ್ರೇಡ್-2 ಹುದ್ದೆಗೆ ಮುಂಬಡ್ತಿ ಹೊಂದಿದ ಅಧಿಕಾರಿಗಳ ಜೇಷ್ಠತೆಯನ್ನು ಹಿರಿಯರಾಗಿ ಹಾಗೂ ಪ್ರಾಂಶುಪಾಲರು ಗ್ರೇಡ್-1 ವೃಂದದಲ್ಲಿನ ಅಧಿಕಾರಿಗಳ ಜೇಷ್ಠತೆಯನ್ನು ಕಿರಿಯರಾಗಿ ಪರಿಗಣಿಸಿ, ದಿನಾಂಕ:01.01.2023 ರಿಂದ 31.12.2023ರ ಅವಧಿಗೆ ದಿನಾಂಕ:01.01.2024ರಲ್ಲಿದ್ದಂತೆ 'ಪ್ರಾಂಶುಪಾಲರು' (ಉಳಿದ ಮೂಲ ವೃಂದ) ವೃಂದದ ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು (ಅನುಬಂಧ-1: ಇಂಜಿನಿಯರಿಂಗ್ ವಿಭಾಗ, ಅನುಬಂಧ-2: ನಾನ್-ಇಂಜಿನಿಯರಿಂಗ್ ವಿಭಾಗ, ಅನುಬಂಧ-3: ವಿಜ್ಞಾನ ವಿಭಾಗ) ಉಲ್ಲೇಖ(4)ರ ಅಧಿಸೂಚನೆಯಲ್ಲಿ ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು.

ಅದಕ್ಕೆ ಅನುಗುಣವಾಗಿ, ಸ್ವೀಕೃತವಾದ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಆಕ್ಷೇಪಣೆಗಳಿಗೆ ಷರಾವನ್ನು ಅನುಬಂಧ-4ರಲ್ಲಿ ನೀಡಲಾಗಿದೆ. ಈ ಮೂಲಕ, ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರು ವೃಂದದ ದಿನಾಂಕ: 01.01.2023 ರಿಂದ 31.12.2023ರ ಅವಧಿಗೆ, ದಿನಾಂಕ: 01.01.2024ರಲ್ಲಿದ್ದಂತೆ 'ಪ್ರಾಂಶುಪಾಲರು' (ಉಳಿದ ಮೂಲ ವೃಂದ) ವೃಂದದ **ಅಂತಿಮ ಜೇಷ್ಠತಾ ಪಟ್ಟಿ** (ಅನುಬಂಧ-1: ಇಂಜಿನಿಯರಿಂಗ್ ವಿಭಾಗ, ಅನುಬಂಧ-2: ನಾನ್-ಇಂಜಿನಿಯರಿಂಗ್ ವಿಭಾಗ, ಅನುಬಂಧ-3: ವಿಜ್ಞಾನ ವಿಭಾಗ) ಅನ್ನು ಈ ಮೂಲಕ ಪ್ರಕಟಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ,
ಮತ್ತು ಅವರ ಹೆಸರಿನಲ್ಲಿ

(**ರೂಪ ಪಿ**)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ತಾಂತ್ರಿಕ ಶಿಕ್ಷಣ)

**ಪ್ರತಿ: ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಇ-ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕೋರಿದೆ.**

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ/ ಲೆಕ್ಕಪರಿಶೋಧನೆ-1/2), ಕರ್ನಾಟಕ ರಾಜ್ಯ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
4. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
5. ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ (ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಕಛೇರಿಯ ಮೂಲಕ)
6. ತಾಂತ್ರಿಕ ಶಿಕ್ಷಣ ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು(ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆರವರ ಕಛೇರಿ ಮೂಲಕ)
7. ಉನ್ನತ ಶಿಕ್ಷಣ ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸುವುದು(ಸಮನ್ವಯ ಅಧಿಕಾರಿ, ಮಾಹಿತಿ ಕೇಂದ್ರ)
8. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು/ಒಡಿಜಿಸಿ.
9. Website: www.karnataka.gov.in -> Status of Government Notification (Education Higher Department)

# ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 32 ಡಿಟಿಇ 2024, ದಿನಾಂಕ:24.07.2025ರ

## ಅನುಬಂಧ-1

**ದಿನಾಂಕ:01.01.2023 ರಿಂದ 31.12.2023ರ ಅವಧಿಗೆ ದಿನಾಂಕ:01.01.2024ರಲ್ಲಿದ್ದಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರು (ಉಳಿದ ಮೂಲ ವೃಂದ) ವೃಂದದ (ಇಂಜಿನಿಯರಿಂಗ್ ವಿಭಾಗ) ಅಂತಿಮ ಜೇಷ್ಠತಾ ಪಟ್ಟಿ**

| ಕ್ರ.ಸಂ. | ಹೆಸರು ಶ್ರೀ / ಶ್ರೀಮತಿ | ನೇಮಕಾತಿ ವಿಧಾನ | ಪ್ರವರ್ಗ | ಜನ್ಮ ದಿನಾಂಕ | ವಿದ್ಯಾರ್ಹತೆ | ಸೇವೆಗೆ ಸೇರಿದ ದಿನಾಂಕ | ಪ್ರಾಂಶುಪಾಲರ ಹುದ್ದೆಗೆ | |
|---|---|---|---|---|---|---|---|---|
| | | | | | | | ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ | ಅರ್ಹತಾ ದಿನಾಂಕ |
| 1 | 2 | 3 | 4 | 5 | 6 | 7 | 8 | 9 |
| 1. | ಶ್ರೀಕಾಂತ್ ಜಿ. | ಮುಂಬಡ್ತಿ | ಪ.ಜಾ. | 29.01.1966 | ಬಿಟೆಕ್, ಇಡಿ, ಎಂಟೆಕ್ (ಟೆಕ್ಸ್ ಟೈಲ್ಸ್) | 25.06.1992 | 12.10.2004 | 14.10.2004 |
| 2. | ಡೆರಿಕ್ ಅಲೆಗ್ಸಾಂಡರ್ | ಮುಂಬಡ್ತಿ | ಪ.ಜಾ. | 12.04.1964 | ಬಿಇ(ಟೆಸಿ) | 20.02.1991 | 03.12.2012 | 06.12.2012 |
| 3. | ನಾಗಭೂಷಣ ಕೆ.ಜಿ. | ಮುಂಬಡ್ತಿ | ಪ.ಜಾ. | 20.05.1967 | ಬಿಇ(ಸಿಇ), ಎಂಇ | 29.06.1992 | 03.12.2012 | 03.12.2012 |
| 4. | ಸಂಜೀವ್‌ಕುಮಾರ್ ಚವ್ಹಾಣ್ | ಮುಂಬಡ್ತಿ | ಪ.ಜಾ. | 22.07.1967 | ಬಿಇ(ಸಿಇ), ಎಂಇ | 25.06.1992 | 03.12.2012 | 03.12.2012 |
| 5. | ಡಾ. ಯಮನಪ್ಪ ಎನ್. ದೊಡ್ಡಮನಿ | ಮುಂಬಡ್ತಿ | ಪ.ಜಾ. | 01.08.1967 | ಬಿಇ(ಎಂಇ), ಎಂಟೆಕ್, ಪಿಹೆಚ್‌ಡಿ | 20.07.1992 | 03.12.2012 | 03.12.2012 |
| 6. | ಕೃಷ್ಣಪ್ಪ ಪಿ. | ಮುಂಬಡ್ತಿ | ಪ.ಜಾ. | 01.09.1966 | ಬಿಇ(ಟೆಸಿ) | 20.07.1992 | 04.03.2014 | 05.03.2014 |
| 7. | ಮಂಜುಳ ಎಸ್. | ಮುಂಬಡ್ತಿ | ಪ.ಜಾ. | 14.06.1966 | ಬಿಇ(ಇ&ಸಿ), ಎಂಟೆಕ್ | 23.07.1992 | 04.03.2014 | 05.03.2014 |

(ರೂಪ ಪಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ತಾಂತ್ರಿಕ ಶಿಕ್ಷಣ).

**<u>ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 32 ಡಿಟಿಇ 2024, ದಿನಾಂಕ:24.07.2025ರ</u>**

**ಅನುಬಂಧ-2**

**ದಿನಾಂಕ:01.01.2023 ರಿಂದ 31.12.2023 ರ ಅವಧಿಗೆ ದಿನಾಂಕ:01.01.2024ರಲ್ಲಿದ್ದಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರು (ಉಳಿದ ಮೂಲ ವೃಂದ) ವೃಂದದ (ನಾನ್-ಇಂಜಿನಿಯರಿಂಗ್ ವಿಭಾಗ) ಅಂತಿಮ ಜೇಷ್ಠತಾ ಪಟ್ಟಿ**

| ಕ್ರ.ಸಂ. | ಹೆಸರು ಶ್ರೀ / ಶ್ರೀಮತಿ | ನೇಮಕಾತಿ ವಿಧಾನ | ಪ್ರವರ್ಗ | ಜನ್ಮ ದಿನಾಂಕ | ವಿದ್ಯಾರ್ಹತೆ | ಸೇವೆಗೆ ಸೇರಿದ ದಿನಾಂಕ | ಪ್ರಾಂಶುಪಾಲರ ಹುದ್ದೆಗೆ | |
|---|---|---|---|---|---|---|---|---|
| | | | | | | | ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ | ಅರ್ಹತಾ ದಿನಾಂಕ |
| 1 | 2 | 3 | 4 | 5 | 6 | 7 | 8 | 9 |
| 1. | ಶೇಖರ್ | ಮುಂಬಡ್ತಿ | ಪ.ಜಾ. | 01.06.1965 | ಎಂಕಾಂ. | 16.03.1992 | 12.10.2004 | 14.10.2004 |
| 2. | ಮೀರಾಬಾಯಿ ಎಸ್. | ಮುಂಬಡ್ತಿ | ಪ.ಜಾ. | 18.01.1967 | ಎಂಲಿಬ್. | 26.02.1997 | 03.12.2012 | 20.12.2012 |

(ರೂಪ ಪಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ತಾಂತ್ರಿಕ ಶಿಕ್ಷಣ).

**ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 32 ಡಿಟಿಇ 2024, ದಿನಾಂಕ:24.07.2025ರ**

**ಅನುಬಂಧ-3**

**ದಿನಾಂಕ: 01.01.2023 ರಿಂದ 31.12.2023 ರ ಅವಧಿಗೆ ದಿನಾಂಕ:01.01.2024ರಲ್ಲಿದ್ದಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರು(ಉಳಿದ ಮೂಲ ವೃಂದ) ವೃಂದದ (ವಿಜ್ಞಾನ ವಿಭಾಗ)**
**ಅಂತಿಮ ಜೇಷ್ಠತಾ ಪಟ್ಟಿ**

| ಕ್ರ.ಸಂ. | ಹೆಸರು ಶ್ರೀ / ಶ್ರೀಮತಿ | ನೇಮಕಾತಿ ವಿಧಾನ | ಪ್ರವರ್ಗ | ಜನ್ಮ ದಿನಾಂಕ | ವಿದ್ಯಾರ್ಹತೆ | ಸೇವೆಗೆ ಸೇರಿದ ದಿನಾಂಕ | ಪ್ರಾಂಶುಪಾಲರ ಹುದ್ದೆಗೆ ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ | ಪ್ರಾಂಶುಪಾಲರ ಹುದ್ದೆಗೆ ಅರ್ಹತಾ ದಿನಾಂಕ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| | ಗೀತಾ ಎಂ. | ಮುಂಬಡ್ತಿ | ಪ.ಪಂ. | 08.06.1968 | ಎಂಎಸ್‌ಸಿ | 08.03.1995 | 03.12.2012 | 07.12.2012 |

(ರೂಪ ಪಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ತಾಂತ್ರಿಕ ಶಿಕ್ಷಣ).

**ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 32 ಡಿಟಿಇ 2024, ದಿನಾಂಕ:24.07.2025ರ**

**ಅನುಬಂಧ-4**

| ಕ್ರ. ಸಂ | ಆಕ್ಷೇಪಣೆ ಸಲ್ಲಿಸಿದವರ ವಿವರ & ದಿನಾಂಕ | ಆಕ್ಷೇಪಣೆಯ ಸಂಕ್ಷಿಪ್ತ ವಿವರ | ಷರಾ: |
|---|---|---|---|
| 1. | ಅಧ್ಯಕ್ಷರು,ಅಖಿಲ ಕರ್ನಾಟಕ ತಾಂತ್ರಿಕ ಶಿಕ್ಷಣ ಇಲಾಖೆಯ ಪರಿಶಿಷ್ಟ ಜಾತಿ ಮತ್ತು ಪರಿಶೀಷ್ಟ ಪಂಗಡಗಳ ನೌಕರರ ಸಂಘ ನಂ.62, ಆರ್.ಪಿ ಬ್ಲಾಕ್, ಟೀಚರ್ಸ್ ಲೇ ಔಟ್, ಕಲ್ಯಾಣಗಿರಿನಗರ ಅಂಚೆ ಮೈಸೂರು-570019 | ಶ್ರೀ ಅಶೋಕ ಬೆಳ್ಳಿ, ಆಯ್ಕೆ ಶ್ರೇಣಿ ಉಪನ್ಯಾಸಕರು,ಯಂತ್ರೋಪಕರಣ(ಎಂ.ಟಿ.ಟಿ) ವಿಭಾಗ, ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್, ಮೈಸೂರು ಇವರಿಗೆ ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿನ ವಿಭಾಗಾಧಿಕಾರಿ ಹುದ್ದೆಗೆ ಪೂರ್ವಾನ್ವಯವಾಗಿ ಮುಂಬಡ್ತಿ ನೀಡಲು ಇಲಾಖಾ ಮುಂಬಡ್ತಿ ಸಭೆಯನ್ನು ಮರು ನಿಗದಿಪಡಿಸುವಂತೆ ಕೋರಿರುತ್ತಾರೆ. | ಆಕ್ಷೇಪಣೆಯಲ್ಲಿನ ಅಂಶಗಳು ಪ್ರಾಂಶುಪಾಲರು ಜೇಷ್ಠತಾ ಪಟ್ಟಿಗೆ ಸಂಬಂಧಿಸಿರುವುದಿಲ್ಲ. |

(ರೂಪ ಪಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ತಾಂತ್ರಿಕ ಶಿಕ್ಷಣ)